# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ಕಾ.ವಿ./ಟೆಂಡರು/ನಗರಸಭಾ ನಿಧಿ/ವಿವ–20/2009–10 ದಿನಾಂಕ: 16–07–2009.

## ಅಲ್ಪಾವಧಿ ಟೆಂಡರು ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು ಹಾಗೂ ನಿಯಮಾವಳಿ–2000 ರಂತೆ ಲೋಕೋಪಯೋಗಿ ಇಲಾಖೆ ಹಾಗೂ ಶಿರಸಿ ನಗರಸಭೆಯಲ್ಲಿ ಪ್ರಸ್ತುತ ಸಾಲಿಗೆ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ನಗರಸಭಾ ನಿಧಿಯಡಿಯಲ್ಲಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಕೊಳ್ಳಲು ಅನುವುವಾಗುವಂತೆ ಟೆಂಡರನ್ನು ಕರೆಯಲಾಗಿದೆ. ಭರ್ತಿ ಮಾಡಿದ ಟೆಂಡರುಗಳನ್ನು ಲಕೋಟೆಗಳಲ್ಲಿ ಇಟ್ಟು ಮೊಹರ್ ಬಂದ್ ಮಾಡಿ ಕಾಮಗಾರಿ ಹೆಸರು, ಗುತ್ತಿಗೆದಾರರ ಹೆಸರು, ವಿಳಾಸ ನಮೂದಿಸಿ ಈ ಕಚೇರಿಯಲ್ಲಿ ದಿನಾಂಕ: 25–07–2009ರ ಸಂಜೆ: 4:30 ಗಂಟೆಯವರೆಗೆ ಸಲ್ಲಿಸುವುದು. ಸ್ವೀಕೃತ ಟೆಂಡರುಗಳನ್ನು ದಿನಾಂಕ: 27–07–2009 ರಂದು ಸಂಜೆ: 5:00 ಗಂಟೆಗೆ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ **ನಗರಸಭಾ ಕಚೇರಿಯಲ್ಲಿ** ತೆರೆಯಲಾಗುವುದು. ರಜೆ ಇದ್ದಲ್ಲಿ ಮುಂದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವುದು. ಇಲ್ಲವಾದಲ್ಲಿ ಮುಂದಿನ ದಿನಾಂಕಗಳನ್ನು ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ, ಷರತ್ತುಗಳಿಗಾಗಿ ಕಚೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಕೇಳಿ ತಿಳಿದುಕೊಳ್ಳತಕ್ಕದ್ದು. ದೂರವಾಣಿ ಸಂಖ್ಯೆ 08384–226338.

**Calendar of Events:**

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 25–07–2009 (5:30 ಗಂಟೆಗೆ)
2. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 27–07–2009 (4:30 ಗಂಟೆಗೆ)
3. ಸ್ವೀಕೃತ ಟೆಂಡರುಗಳನ್ನು ತೆರೆಯುವ ದಿನಾಂಕ : 27–07–2009 (5:00 ಗಂಟೆಗೆ)

| ಕ್ರ.ಸಂ. | ಕಾಮಗಾರಿಯ ಹೆಸರು | ದರವಾರದ ವಿಧ | ಟೆಂಡರಿಗಿಟ್ಟ ಮೊತ್ತ | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|---|---|
| 1 | ಶಿವಾಜಿ ಚೌಕ್‌ದಲ್ಲಿರುವ ಸಾರ್ವಜನಿಕ ಶೌಚಾಲಯಕ್ಕೆ ಸೆಪ್ಟಿಕ್ ಟ್ಯಾಂಕ್ ನಿರ್ಮಿಸುವುದು. | ಶೇಕಡಾವಾರು | 85,000-00 | 2,125-00 | 250/- + ತೆರಿಗೆ | 10 ದಿನಗಳು | 4ನೇ ದರ್ಜೆ ಹಾಗೂ ಮೇಲ್ಪಟ್ಟು |

**ವಿಧಿಸಲಾಗಿರುವ ಪೂರ್ವ ಶರತ್ತುಗಳು:–**

1. ಪ್ರಕಟಣೆ ಪ್ರಚುರಪಡಿಸಿದ ದಿನಾಂಕದಿಂದ ಖಾಲಿ ಟೆಂಡರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಅಂದರೆ, ದಿನಾಂಕ: 25–07–2009 ರವರೆಗೆ ಟೆಂಡರಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

2. ಗುತ್ತಿಗೆದಾರರು ಯಾವುದೇ ಶರತ್ತುಗಳನ್ನೊಳಗೊಂಡು ಸಲ್ಲಿಸಲಾಗುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

3. ಗುತ್ತಿಗೆದಾರರು ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವಾಗ ನೋಂದಣಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ ಮತ್ತು ಗುತ್ತಿಗೆದಾರರ ಪಾಸ್ ಪುಸ್ತಕವನ್ನು ಪರಿಶೀಲನೆಗಾಗಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

4. ಖುಲ್ಲಾ ಟೆಂಡರ್ ಫಾರ್ಮಗಳಿಗಾಗಿ ತುಂಬಿದ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಮತ್ತು ಬೇರೆ ಕೆಲಸಗಳಿಗೆ ವರ್ಗಾಯಿಸಲಾಗುವುದಿಲ್ಲ.

5. ಗುತ್ತಿಗೆದಾರರು ಖಾಲಿ ಟೆಂಡರು ಫಾರ್ಮಗಳಿಗೆ ಅರ್ಜಿ ಸಲ್ಲಿಸುವಾಗ ಗುತ್ತಿಗೆ ಪ್ರಮಾಣ ಪತ್ರ ಹಾಗೂ ಸಂಬಂಧಿಸಿದ ಇಲಾಖೆಯಿಂದ ಪಡೆದ ಇತ್ತೀಚಿನ ಆದಾಯ ಕರ ಹಾಗೂ ಮಾರಾಟ ಕರ ತೀರುವಳಿಗೊಳಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

6. ಗುತ್ತಿಗೆದಾರರು ನಿಗದಿತ ಮುಂಗಡ ಠೇವಣಿ ಮೊತ್ತವನ್ನು ಪೌರಾಯುಕ್ತರು, ನಗರಸಭೆ, ಶಿರಸಿ ರವರ ಪದನಾಮಕ್ಕೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಡಿ.ಡಿ. ಯನ್ನು ಸಲ್ಲಿಸುವುದು.

7. ಗುತ್ತಿಗೆದಾರರಿಗೆ ವಹಿಸಿಕೊಡಲಾಗಿರುವ ಕಾಮಗಾರಿಯನ್ನಾಗಲೀ ಕಾಮಗಾರಿಯ ಯಾವುದೇ ಭಾಗದ ನಿರ್ವಹಣೆಯನ್ನಾಗಲೀ ಯಾವುದೇ ವ್ಯಕ್ತಿಗೆ ಜಿ.ಪಿ.ಎ. ಮೂಲಕವಾಗಲೀ ಅಥವಾ ಇನ್ನಿತರ ರೀತಿಯಲ್ಲಿ ಉಪ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡುವುದನ್ನು ನಿಷೇಧಿಸಲಾಗಿದೆ.

8. ಗುತ್ತಿಗೆದಾರರು ಟೆಂಡರು ಅನುಮೋದನೆ ಪತ್ರವನ್ನು ಸ್ವೀಕರಿಸಿದ ಮೂರು ದಿನರೊಳಗೆ ಕರಾರು ಮಾಡಿಕೊಳ್ಳದಿದ್ದಲ್ಲಿ ಮತ್ತು ಕರಾರನ್ನು ಮಾಡಿಕೊಂಡ ಮರುದಿನವೇ ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದಲ್ಲಿ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರು ನಿಯಮಾನುಸಾರ ಕರಾರನ್ನು ರದ್ದುಗೊಳಿಸಲಾಗುವುದು. ಕಾಮಗಾರಿಯನ್ನು ನಿರ್ವಹಿಸಲು ಮರು-ಟೆಂಡರುಗಳನ್ನು ಕರೆದು ನಿಮ್ಮ ವೈಯಕ್ತಿಕ ಹೊಣೆ ಮತ್ತು ಹೆಚ್ಚುವರಿಯಾಗಿ ತಗಲುವ ಆರ್ಥಿಕ ವೆಚ್ಚವನ್ನು ನಿಮ್ಮಿಂದ ವಸೂಲಿ ಮಾಡಿಕೊಳ್ಳಲಾಗುವುದು.

9. ಸಕ್ಷಮ ಪ್ರಾಧಿಕಾರವು ಈ ಟೆಂಡರ್ ಪ್ರಕಟಣೆಯನ್ನಾಗಲೀ ಪ್ರಕಟಣೆಯಲ್ಲಿನ ಯಾವುದೇ ಅಥವಾ ಎಲ್ಲಾ ಕಾಮಗಾರಿಗಳನ್ನು ಯಾವುದೇ ಕಾರಣಗಳನ್ನು ನೀಡದೇ ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

10. ಕಾಮಗಾರಿಯನ್ನು ವಹಿಸಿಕೊಂಡ ಗುತ್ತಿಗೆದಾರರು ನಿಗದಿಗೊಳಿಸಿದ ಕಾಲ ಮಿತಿಯೊಳಗಾಗಿ ಪೂರ್ತಿಗೊಳಿಸತಕ್ಕದ್ದು. ಕುಂಠಿತ ಪ್ರಗತಿಗೆ ಟೆಂಡರು ನಿಯಮಾವಳಿಗಳ ಪ್ರಕಾರ ದಂಡ ವಿಧಿಸಲಾಗುವುದು.

11. ಕಾಮಗಾರಿಯ ಮೂರು ಹಂತದ ಛಾಯಾ ಚಿತ್ರಗಳನ್ನು (ಕಾಮಗಾರಿ ಪೂರ್ವದಲ್ಲಿ, ಕಾಮಗಾರಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ) ತಮ್ಮ ಸ್ವಂತ ಖರ್ಚಿನಲ್ಲಿ ತಗೆದು ಸಲ್ಲಿಸತಕ್ಕದ್ದು.

12. ಗುತ್ತಿಗೆದಾರರು ಕಾಮಗಾರಿಯ ಕಾರ್ಯಾದೇಶ ಪಡೆದ ದಿನಾಂಕದಂದು ಸ್ಥಳವನ್ನು ಹಸ್ತಾಂತರಿಸಲಾಗಿದೆಯೆಂದು ತಿಳಿಯತಕ್ಕದ್ದು.

13. ಬಿಲ್ಲಿನಲ್ಲಿ ಮುರಿತಾಯ ಮಾಡಲಾದ ಭದ್ರತಾ ಠೇವಣಿ ಮೊತ್ತ ಹಾಗೂ ಮುಂಗಡ ಠೇವಣಿ ಮೊತ್ತವನ್ನು 2 ವರ್ಷದ ಗ್ಯಾರಂಟಿ ಅವಧಿಯವರೆಗೆ ಹಿಂದಿರುಗಿಸಲಾಗುವುದಿಲ್ಲ. ಮತ್ತು ಈ ಅವಧಿಯಲ್ಲಿ ಕಾಮಗಾರಿ ಕಳಪೆ ಗುಣಮಟ್ಟದ ಎಂದು ತಿಳಿದು ಬಂದಲ್ಲಿ ಭದ್ರತಾ ಠೇವಣಿ ಮೊತ್ತ ಹಾಗೂ ಮುಂಗಡ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇಂತಹ ಟೆಂಡರುದಾರರಿಗೆ ಮುಂದಿನ ಟೆಂಡರುಗಳಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ.

14. ಕಾಮಗಾರಿಯ ಸಂಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿಯೇ ಕಾಮಗಾರಿ ಸ್ಥಳದಲ್ಲಿ ಅಳವಡಿಸತಕ್ಕದ್ದು.

15. ಕಾರ್ಯಾದೇಶ ನೀಡುವ ವೇಳೆಗೆ ಹೆಚ್ಚಿನ ಷರತ್ತುಗಳನ್ನು ವಿಧಿಸಿ ಕಾರ್ಯಾದೇಶವನ್ನು ನೀಡಲಾಗುವುದು.

16. ಕಾಮಗಾರಿಯಲ್ಲಿ ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಮತ್ತು ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ತರಹದ ಕೆಲಸಗಾರರ ಸುರಕ್ಷತೆ ನಿಮ್ಮದೇ ಪೂರ್ಣ ಜವಾಬ್ದಾರಿಯಾಗಿದ್ದು, ಸದರಿ ಕಾಮಗಾರಿ ವೇಳೆಯಲ್ಲಿ ಯಾವುದೇ ಪ್ರಾಣ ಅಥವಾ ಹಾನಿ ಸಂಭವಿಸಿದ್ದಲ್ಲಿ ಸಂಪೂರ್ಣ ಜವಾಬ್ದಾರಿ ನಿಮ್ಮದ್ದಾಗಿರುತ್ತದೆ.

17. ಕಾಮಗಾರಿಗೆ ಬೇಕಾಗುವ ಕಚ್ಚಾ ವಸ್ತು ಮತ್ತು ಸಾಮಗ್ರಿಗಳನ್ನು ಶೇಖರಣೆ ಮಾಡುವಾಗ ಸಾರ್ವಜನಿಕರ ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಶೇಖರಿಸುವುದು. ಈ ರೀತಿಯಾಗಿ ಶೇಖರಿಸುವ ಸಾಮಗ್ರಿಗಳ ನಿರ್ವಹಣೆಯಿಂದ ರಸ್ತೆಗೆ ಅಥವಾ ಇನ್ನಿತರ ಜಾಗೆಗಳಿಗೆ ಹಾನಿಯಾದ್ದಲ್ಲಿ ಅದನ್ನು ನೀವೇ ಭರಿಸತಕ್ಕದ್ದು.

18. ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದು ಗಮನಕ್ಕೆ ಬಂದಲ್ಲಿ ಕರಾರು ಉಲ್ಲಂಘನೆ ಮಾಡಿದಕ್ಕೆ ಕ್ರಮಜರುಗಿಸಲಾಗುವುದು.

19. ಈ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ತಾಂತ್ರಿಕ ವಿಭಾಗ, ನಗರಸಭೆ, ಶಿರಸಿ ಇವರಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ನಗರಸಭೆಯ ವೆಬ್‌ಸೈಟ್ ರಲ್ಲಿ ಪಡೆಯಬಹುದಾಗಿದೆ.

20. ಸಂಪರ್ಕ ದೂರವಾಣಿ ಸಂಖ್ಯೆ 08384-226338, ಈ-ಮೇಲ್: comm_srs@yahoo.com

**(ರಮೇಶ ಆಚಾರಿ)**
ಅಧ್ಯಕ್ಷರು,
ನಗರಸಭೆ, ಶಿರಸಿ.

**(ಜಿ. ರಾಮದಾಸ್)** ಕೆ.ಎಮ್.ಎ.ಎಸ್.
ಪೌರಾಯುಕ್ತರು,
ನಗರಸಭೆ, ಶಿರಸಿ.